ಕೆಲಸಕ್ಕೆ ತೆಗೆದುಕೊಂಡಿರುತ್ತದೆ (ಮೃತರಾದ ಇಬ್ಬರು ಕಾರ್ಮಿಕರು ಮತ್ತು ಹೆಸರಿನ ಬಗ್ಗೆ ವಿವಾದವಿರುವ ಒಬ್ಬ ಕಾರ್ಮಿಕರನ್ನು ಹೊರತುಪಡಿಸಿ) ವೇತನ ಇತ್ಯಾದಿ ಬಗ್ಗೆ ರಿಟ್ ಅರ್ಜಿಯು ಗೌರವ ಉಚ್ಚ ನ್ಯಾಯಾಲಯದ ಮುಂದೆ ಬಾಕಿಯಿರುತ್ತದೆ.

ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ ಕುರಿತು

54 (182) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಕಬ್ಬು ಬೆಳೆಗಾರರಿಗೆ ಕಬ್ಬಿನ ಹಣ ಪಾವತಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಆ) ಬಂದಿದ್ದಲ್ಲಿ ಹಣ ಪಾವತಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಬಂದಿದೆ ಸ್ವಾಮಿ

ಆ) ಕಾರ್ಖಾನೆಗೆ ತನ್ನ ದಾಸ್ತಾನಿನಲ್ಲಿರುವ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸಕ್ಕರೆಗೆ ಲಾಭದಾಯಕ ಬೆಲೆಗೆ ಬಿಲ್ ತಯಾರಿಸಲು ಸೂಚಿಸಿದೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಪ್ರಮಾಣದ ದಾಸ್ತಾನನ್ನು ಮಾರಾಟ ಮಾಡಲು ಶಿಫಾರಸ್ಸು ಮಾಡಲು ಇಚ್ಚಿಸಿದೆ. ಕಬ್ಬಿನ ಬಿಲ್ ಬಾಕಿಯು ಕೇವಲ ಒಂದು ವರ್ಷದ್ದು ಅಂದರೆ 2001-2002.

ಬೆಂಗಳೂರಿನ ಲಾಲ್ ಬಾಗ್‌ನಲ್ಲಿರುವ ಕೆರೆ ದುರಸ್ತಿ

124 (1298) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರ ಲಾಲ್‌ಬಾಗ್‌ನಲ್ಲಿರುವ ಕೆರೆಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಲಾಲ್‌ಬಾಗ್ ಕೆರೆಯ ದುರಸ್ಥಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಬಂದಿದೆ

ಆ) ಕೆರೆಯ ಮೇಲ್ಭಾಗದ ಬಡಾವಣೆಗಳ ಒಳಚರಂಡಿಯ ಕೊಳಚೆ ನೀರು ಮಳೆಯ ನೀರಿನ ಜೊತೆ ಬೆರೆತು ನೇರವಾಗಿ ಕೆಳಗೆ ಬರುವುದರಿಂದ ಲಾಲ್‌ಬಾಗ್ ಕೆರೆ ನೀರು ಕಲುಷಿತಗೊಂಡು ಅನುಪಯುಕ್ತವಾಗಿರುತ್ತದೆ. ಈ ಕೊಳಚೆ ನೀರು ಹರಿದು ಬರುವುದನ್ನು ಲಾಲ್‌ಬಾಗ್ ಹೊರಗಡೆಯೆ ತಡೆಯುವ ಬಗ್ಗೆ ಒಂದು ಶಾಶ್ವತ ಯೋಜನೆಯನ್ನು B.W.S.S.B. ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ಅವರು ರೂ. 67.20 ಲಕ್ಷಗಳ ವೆಚ್ಚದಲ್ಲಿ ತಯಾರಿಸಿದ್ದು ಇದನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆ ಪೂರ್ಣಗೊಂಡ ನಂತರ ಕೆರೆಯಲ್ಲಿ ಹೂಳು ಮತ್ತು ಕಳೆ (Water Hyacinth) ತೆಗೆಯಲು ಕ್ರಮ ತೆಗೆದುಕೊಳ್ಳಲಾಗುವುದು.

ಮಾಗಡಿ ಕ್ಷೇತ್ರದ ಅಂಗನವಾಡಿ ಕೇಂದ್ರಗಳ ವಿವರ

125 (844) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?